## ಅಧ್ಯಾಯ – 1

# ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು
## [ಸೆಕ್ಷನ್ 4(1) (ಬಿ) (i)]

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೇಂದ್ರದ ಆರ್.ಟಿ.ಸಿ. ಕಾಯಿದೆ 1950'ರ ಅಡಿಯಲ್ಲಿ ಸಾರ್ವಜನಿಕರಿಗೆ ಉತ್ತಮ, ಸಮರ್ಪಕ ಹಾಗೂ ಸೂಕ್ತ ಪ್ರಯಾಣದರಗಳನ್ನು ವಿಧಿಸಿದ ಸಾರಿಗೆ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರದಿಂದ 1961ರಲ್ಲಿ ಸ್ಥಾಪಿಸಲ್ಪಟ್ಟಿದೆ. ರಾಜ್ಯ ಸರ್ಕಾರವು ಸದರಿ ಕಾಯಿದೆಯ ಅನುಸಾರ ನಿಗಮದ ವ್ಯವಸ್ಥಿತ ಕಾರ್ಯಾಚರಣೆ ಹಾಗೂ ಸಮರ್ಪಕ ಆಡಳತ ವ್ಯವಸ್ಥೆಯ ನಿರ್ವಹಣೆಗಾಗಿ 'ಕರಾರಸಾ ನಿಗಮದ ನಿಯಮಗಳು 1961'ನ್ನು ರೂಪಿಸಿದ್ದು, ಇದರಲ್ಲಿನ ನಿಯಮಗಳ ಅನುಸಾರ ಆಡಳತ ನಿರ್ವಹಣೆ ನಡೆಸಲಾಗುತ್ತಿದೆ.

ಆಡಳತವನ್ನು ಉತ್ತಮ ಪಡಿಸುವ ಉದ್ದೇಶದಿಂದ ನಿಗಮವು ನಾಲ್ಕು ಪ್ರತ್ಯೇಕ ನಿಗಮಗಳಾಗಿ ಬೇರ್ಪಡೆಗೊಂಡವು. ದಿನಾಂಕ 15.08.1997 ರಂದು ಬೆಂಗಳೂರು ಮಹಾನಗರ ಸಾರಿಗೆ ನಿಗಮ, ದಿನಾಂಕ 01.11.1997ರಲ್ಲಿ ಹುಬ್ಬಳ್ಳಿಯಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ದಿನಾಂಕ 01.10.2000 ರಂದು ಗುಲ್ಬರ್ಗದಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಪ್ರಾದೇಶಿಕವಾರು ಪ್ರಾರಂಭಗೊಂಡವು. ಕ.ರಾ.ರ.ಸಾ. ನಿಗಮವು ರಾಜ್ಯದ ದಕ್ಷಿಣ ಭಾಗದ ಹಾಗೂ ಅಂತರ್ ರಾಜ್ಯ ಮಾರ್ಗಗಳ ಕಾರ್ಯಾಚರಣೆಗಳನ್ನು ಮಾಡುತ್ತಿದ್ದು ಈ ನಾಲ್ಕು ನಿಗಮಗಳ ಕಾರ್ಯಾಚರಣೆಯ ನಕ್ಷೆಯನ್ನು ಕೆಳಗೆ ನೀಡಲಾಗಿದೆ.



ಕ.ರಾ.ರ.ಸಾ.ನಿಗಮದ ಕೇಂದ್ರ ಆಡಳಿತ ಕಛೇರಿಯು ಬೆಂಗಳೂರಿನಲ್ಲಿದೆ. ಪ್ರಸ್ತುತ 14 ವಿಭಾಗಗಳ ವ್ಯಾಪ್ತಿಯಲ್ಲಿ 68 ಘಟಕಗಳನ್ನು ಹೊಂದಿದೆ. ಇದರ ಜೊತೆಯಲ್ಲಿ 2 ಪ್ರಾದೇಶಿಕ ಕಾರ್ಯಾಗಾರಗಳು, 1 ಕೇಂದ್ರೀಯ ತರಬೇತಿ ಕೇಂದ್ರ, 2 ಪ್ರಾದೇಶಿಕ ತರಬೇತಿ ಕೇಂದ್ರಗಳು, 1 ಆಸ್ಪತ್ರೆ ಹಾಗೂ 1 ಮುದ್ರಣಾಲಯವನ್ನು ಹೊಂದಿದೆ. ರಾಷ್ಟ್ರದಲ್ಲಿಯೇ ನಾಲ್ಕನೆಯ ದೊಡ್ಡ ರಾಜ್ಯ ರಸ್ತೆ ಸಾರಿಗೆ ನಿಗಮವೆನಿಸಿದ್ದು ಸುಮಾರು 33546 ಕಾರ್ಮಿಕರನ್ನು ಹೊಂದಿದೆ.

ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಡುವ ಹಿರಿಯ ಐ.ಎ.ಎಸ್./ಐ.ಪಿ.ಎಸ್. ಅಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಗೊಳ್ಳುತ್ತಾರೆ. ಇವರಿಗೆ ಇನ್ನಿತರ ಪ್ರಾಕಾರ್ಯ ನಿರ್ದೇಶಕರುಗಳಾದ ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ), ನಿರ್ದೇಶಕರು(ಭದ್ರತೆ ಮತ್ತು ಜಾಗೃತಿ), ನಿರ್ದೇಶಕರು(ಕಾರ್ಯಾಚರಣೆ) ಹಾಗೂ ನಿರ್ದೇಶಕರು(ತಾಂತ್ರಿಕ) ಇವರುಗಳು ಸಹಾಯಕರಾಗಿರುತ್ತಾರೆ. ಹಾಗೂ ಇತರೆ ಇಲಾಖೆಯ ಮುಖ್ಯಸ್ಥರು ಇವರಡಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಪ್ರಮುಖ ನಿರ್ಧಾರಗಳು ಇಲ್ಲಿಂದ ಹೊರಬಿದ್ದು ಇವುಗಳನ್ನು ಪರಿಣಾಮಕಾರಿಯಾಗಿ ವಿಭಾಗ ಮತ್ತು ಘಟಕ ಮಟ್ಟದಲ್ಲಿ ಕಾರ್ಯರೂಪಕ್ಕೆ ತರಲು ಇತರ ಅಧಿಕಾರಿಗಳು ಜವಾಬ್ದಾರಿ ಹೊಂದಿರುತ್ತಾರೆ. ಕೇಂದ್ರ ಕಛೇರಿಯು ವಿಭಾಗ ಮತ್ತು ಘಟಕದ ಉತ್ತಮ ಕಾರ್ಯ ನಿರ್ವಹಣೆಯ ಬಗ್ಗೆ ಸಮೀಕ್ಷೆಯನ್ನು ನಡೆಸಿ ಅಲ್ಲಿಗೆ ಬೇಕಾದ ಅಗತ್ಯಗಳನ್ನು ಪೂರೈಸುತ್ತದೆ. ಹಾಗೂ ಕೇಂದ್ರ ಕಛೇರಿಯು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಇತರೆ ಸಾರಿಗೆ ಸಂಬಂಧಿತ ಇಲಾಖೆಗಳೊಂದಿಗೆ ವ್ಯವಹರಿಸುತ್ತಿದೆ. **ಇಲಾಖೆಗಳ ಸಾಂಸ್ಥಿಕ ವಿನ್ಯಾಸವನ್ನು (Organisation structure) 'ಅನುಬಂಧ-ಅ ರಲ್ಲಿ ನೀಡಲಾಗಿದೆ**.

ವಿಭಾಗ ಮಟ್ಟದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ನೇತೃತ್ವ ವಹಿಸಿ ಕೇಂದ್ರ ಕಛೇರಿಯ ಮಾರ್ಗದರ್ಶನದೊಂದಿಗೆ ಕೆಲಸವನ್ನು ನಿರ್ವಹಿಸುತ್ತಾರೆ. ವಿಭಾಗೀಯ ಕಛೇರಿಯು ಘಟಕಗಳ ಕಾರ್ಯಾಚರಣೆ ಹಾಗೂ ಆಡಳಿತ ಉಸ್ತುವಾರಿಯನ್ನು ವಹಿಸಿದೆ. ವಿಭಾಗದಲ್ಲಿ ಶಾಖೆಗಳ ಶಾಖಾ ಮುಖ್ಯಸ್ಥರು ವಿಭಾಗೀಯ ನಿಯಂತ್ರಣಾಧಿಕಾರಿಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

**ಈ ಶಾಖೆಗಳ ಪಟ್ಟಿಯನ್ನು ಅನುಬಂಧ 2 ರಲ್ಲಿ ನೀಡಲಾಗಿದೆ**. ಪ್ರತಿ ವಿಭಾಗದಲ್ಲಿ ಸರಾಸರಿ 5 ರಿಂದ 6 ಘಟಕಗಳು ಕಾರ್ಯ ನಿರ್ವಹಿಸುತ್ತದೆ.

ಘಟಕವು ಕಾರ್ಯಾಚರಣೆಯ ಹಾಗೂ ಆದಾಯವನ್ನು ಗಳಿಸುವ ಒಂದು ಮುಖ್ಯ ಕೇಂದ್ರವಾಗಿದೆ. ಪ್ರತಿ ಘಟಕದಲ್ಲಿ ಘಟಕ ವ್ಯವಸ್ಥಾಪಕರು ಮುಖ್ಯಸ್ಥರಾಗಿದ್ದು ಘಟಕದ ನಿರ್ವಹಣೆಯಲ್ಲಿ ಇವರಿಗೆ ಮೇಲ್ವಿಚಾರಕ ಸಿಬ್ಬಂದಿ ಹಾಗೂ ಇತರೆ ನೌಕರರು ಸಹಾಯಕರಾಗಿರುತ್ತಾರೆ. ಘಟಕದಲ್ಲಿ ಬಸ್‌ಗಳ ಕಾರ್ಯಾಚರಣೆ ಸಿಬ್ಬಂದಿಯ ನಿಯೋಜನೆ ಹಾಗೂ ಆದಾಯ ಗಳಿಸುವುದು ಹಾಗೂ ಸಾರ್ವಜನಿಕರ ಬೇಡಿಕೆ ದೂರು, ಸಲಹೆಗಳಿಗೆ ಸ್ಪಂದಿಸಲಾಗುತ್ತದೆ. ತಾಂತ್ರಿಕ ಇಲಾಖೆಯು ವಾಹನಗಳ ದುರಸ್ಥಿ ಹಾಗೂ ಇವುಗಳಿಗೆ ಸಂಬಂಧಿತ ದಾಖಲೆಗಳನ್ನು ನಿರ್ವಹಿಸುತ್ತದೆ. ಲೆಕ್ಕಪತ್ರ ಇಲಾಖೆಯು ನಿರ್ವಾಹಕರಿಗೆ ಟಿಕೆಟ್ ಯಂತ್ರಗಳ ವಿತರಣೆಯಿಂದ ಹಿಡಿದು ಗಳಿಸುವ ಆದಾಯದ ಲೆಕ್ಕ, ನಗದನ್ನು ಸ್ವೀಕರಿಸುವುದು ಅದನ್ನು ಬ್ಯಾಂಕಿಗೆ ಸಲ್ಲಿಸುವುದು, ಸಿಬ್ಬಂದಿಗೆ ಸಂಬಳ ನೀಡುವುದು ಇತ್ಯಾದಿಗಳನ್ನು ನಿರ್ವಹಿಸುತ್ತದೆ. ನಿರ್ವಹಣೆಗಾಗಿ ಬೇಕಾಗುವ ಬಿಡಿ ಭಾಗಗಳ ಇಂಧನದ ಹಾಗೂ ಇತರೆ ವಸ್ತುಗಳನ್ನು ಪಡೆದು ಅದನ್ನು ಪೂರೈಸುವ ನಿರ್ವಹಣೆಯನ್ನು ಉಗ್ರಾಣ ಶಾಖೆಯು ನಿರ್ವಹಿಸುತ್ತದೆ.

ಇದರೊಂದಿಗೆ ನಿಗಮದಲ್ಲಿ ಟಿಕೆಟ್‌ಗಳ ಮುದ್ರಣ ಇಲಾಖೆ, ಅಧಿಕಾರಿಗಳು ಹಾಗೂ ನೌಕರರಿಗೆ ತರಬೇತಿ ಕೇಂದ್ರಗಳು, ದೊಡ್ಡ ಮಟ್ಟದ ತಾಂತ್ರಿಕ ನಿರ್ವಹಣೆಗಾಗಿ ಪ್ರಾದೇಶಿಕ ಕಾರ್ಯಾಗಾರಗಳು, ನೌಕರರ ಹಾಗೂ ಅಧಿಕಾರಿಗಳ ಮತ್ತು ಕುಟುಂಬ ವರ್ಗದವರ ಆರೋಗ್ಯದ ದೃಷ್ಟಿಯಿಂದ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಾಜ್ಯದ 15 ಜಿಲ್ಲೆಗಳ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದೆ. ನಿಗಮವು 2008-09ರ ವರ್ಷಾಂತ್ಯಕ್ಕೆ 6921 ವಾಹನ ಬಲದೊಂದಿಗೆ 6166 ಅನುಸೂಚಿಗಳನ್ನು ಕಾರ್ಯಾಚರಿಸಿದ್ದಿತು. ಪ್ರತಿ ದಿನದ ಸರಾಸರಿ ಕಾರ್ಯಾಚರಣೆ ಕಿ.ಮೀ.ಗಳು ಹಾಗೂ ಪ್ರಯಾಣಿಸುವ ಪ್ರಯಾಣಿಕರ ಪ್ರಮಾಣವು ಕ್ರಮವಾಗಿ 22.20 ಲಕ್ಷ ಹಾಗೂ 25.00 ಲಕ್ಷಗಳಾಗಿರುತ್ತವೆ. ಪ್ರತಿದಿನ ಸರಾಸರಿ 2.85 ಲಕ್ಷ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ನಿಗಮದ ವಾಹನಗಳಲ್ಲಿ ಸಂಚರಿಸುತ್ತಿದ್ದಾರೆ. ಸುಮಾರು 13145 ಹಳ್ಳಿಗಳಿಗೆ ಹಾಗೂ ಪ್ರಮುಖ ಪಟ್ಟಣ/ನಗರ ಕೇಂದ್ರಗಳಿಗೆ ಹಾಗೂ ನೆರೆಹೊರೆಯ ರಾಜ್ಯಗಳಾದ ಮುಂಬೈ, ಪೂನಾ,

ಹೈದರಾಬಾದ್, ಚೆನ್ನೈ, ತಿರುವನಂತಪುರ, ಕೊಚ್ಚಿನ್, ಕ್ಯಾಲಿಕಟ್ ಇನ್ನೂ ಮುಂತಾದ ಸ್ಥಳಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ.

ಹಲವಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದ ಕ.ರಾ.ರ.ಸಾ.ನಿಗಮವು 2001-02ರಿಂದ ಲಾಭಗಳಿಸಲು ಪ್ರಾರಂಭಿಸಿತು. 2008-09ರ ಸಾಲಿನಲ್ಲಿ ರೂ 1635.84 ಕೋಟಿಗಳಷ್ಟು ಒಟ್ಟು ಆದಾಯವನ್ನು ಗಳಿಸಿದ್ದು, 57.70 ಕೋಟಿ ರೂ.ಗಳ ನಿವ್ವಳ ಲಾಭಗಳಿಸಿರುತ್ತದೆ.

ನಿಗಮವು ರಾಜ್ಯದ ಜನತೆಗೆ ಸಮರ್ಪಕ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಸಾರಿಗೆ ಸೌಲಭ್ಯವನ್ನು ಒದಗಿಸಲು ಒತ್ತನ್ನು ನೀಡಲಾಗಿದ್ದು ಲಗ್ಗೇಜುಗಳನ್ನು ಸಾಗಿಸಲು ಹೆಚ್ಚು ಸ್ಥಳಾವಕಾಶದ ಬಸ್ಸುಗಳನ್ನು ಸಹ ಒದಗಿಸಲಾಗಿದ್ದು ಬಸ್ ಛಾವಣಿಯ ಪ್ರಯಾಣವನ್ನು ತಡೆಗಟ್ಟಲಾಗಿದೆ.

ಪಟ್ಟಣಗಳ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಆದ್ಯತೆಯ ಮೇರೆಗೆ ತಡೆರಹಿತ ಹಾಗೂ ವೇಗದೂತ ಸಾರಿಗೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಒದಗಿಸಲಾಗಿದ್ದು, ಇದರಿಂದ ಜೀಪು-ಮ್ಯಾಕ್ಸಿಕ್ಯಾಬ್‌ಗಳಲ್ಲಿ ಸಂಚರಿಸುವಂತಹ ಪ್ರಯಾಣಿಕರೂ ಸಹ ಕ.ರಾ.ರ.ಸಾ. ನಿಗಮದ ವಾಹನಗಳಲ್ಲಿ ಸಂಚರಿಸಲು ಅನುಕೂಲವಾಗಿದೆ.

<u>ನಮ್ಮ ದೃಷ್ಟಿಕೋನ</u>

ಪ್ರಯಾಣಿಕರಿಗೆ ಸುರಕ್ಷಿತ, ವಿಶ್ವಾಸನೀಯ, ಸೌಜನ್ಯಪೂರಕ, ಮಿತವ್ಯಯ, ಪರಿಸರ-ಸ್ನೇಹಿ, ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು.

<u>ನಮ್ಮ ಧ್ಯೇಯೋದ್ದೇಶ</u>

- ಪ್ರಯಾಣಿಕರ ನಿರೀಕ್ಷೆಗಳನ್ನು ನೆರವೇರಿಸುವುದು ಮತ್ತು ಪರಿಸರ-ಸ್ನೇಹಿ ಹಾಗೂ ಮೌಲ್ಯಾಧಾರಿತ ಸೇವೆಯನ್ನು ಒದಗಿಸುವುದು
- ನವೀನ ತಂತ್ರಜ್ಞಾನವನ್ನು ಬಳಸಿ ನಿರಂತರ ಸುಧಾರಣೆಯನ್ನು ತರುವುದು ಹಾಗೂ ನವಶೋಧನೆಗೆ ಪ್ರೋತ್ಸಾಹ ನೀಡುವುದು

- ಕಾರ್ಮಿಕ ಕಲ್ಯಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಮೇಲೆ ಒತ್ತು ನೀಡಿ ಎಲ್ಲಾ ಮಟ್ಟದಲ್ಲಿ ನಮ್ಮ ಕಾರ್ಮಿಕರಲ್ಲಿ ಗುಣಮಟ್ಟ ಜಾಗೃತಿಯನ್ನು ಬೇರೂರಿಸುವುದು
- ಪರಿಸರ ಸಮಸ್ಯೆಯ ಕುರಿತು ನಮ್ಮ ಕಾರ್ಮಿಕರಲ್ಲಿ ಉತ್ಸಾಹಭರಿತ ಜವಾಬ್ದಾರಿ ಮತ್ತು ಬಿಚ್ಚು ಮನಸ್ಸಿನ ಸಂಪರ್ಕವನ್ನು ಕಲ್ಪಿಸುವುದು
- ಸುರಕ್ಷಿತ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಟ್ಟಗಳನ್ನು ಸಾಧಿಸುವುದು

<u>ಗುಣಮಟ್ಟ ಕಾರ್ಯನೀತಿ</u>

ಕರಾರಸಾ ನಿಗಮದ ಪ್ರಾದೇಶಿಕ ಕಾರ್ಯಾಗಾರ, ಕೆಂಗೇರಿ ಇಲ್ಲಿ ನಿಗಮವು ತನ್ನ ಉತ್ಪನ್ನಗಳನ್ನು ಮತ್ತು ಪರಿಷ್ಕರಣಗಳನ್ನು ನಿರಂತರವಾಗಿ ಸುಧಾರಿಸಿ, ಸುಸಂಗತ ಗುಣಮಟ್ಟದ ಉತ್ಪನ್ನಗಳನ್ನು ಲೋಪದೋಷಗಳಿಲ್ಲದಂತೆ ಉತ್ಪಾದಿಸುವ ಮೂಲಕ ಪ್ರಯಾಣಿಕರನ್ನು ಸಂತೃಪ್ತಿಪಡಿಸಿ ಜಾಗತಿಕ ಮುಖಂಡತ್ವವನ್ನು ಹೊಂದಲು ಬದ್ಧರಾಗಿದ್ದೇವೆ. ಐ. ಎಸ್. ಒ. 2001 : 2000 ಗುಣಮಟ್ಟ ನಿರ್ವಹಣೆ ಪದ್ಧತಿಯನ್ನು ಅಳವಡಿಸಿಕೊಂಡು ನಿರಂತರ ತರಬೇತಿಯ ಮೂಲಕ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸಲಾಗುತ್ತಿದೆ.

<u>ಪರಿಸರ ಕಾರ್ಯನೀತಿ</u>

ಕರಾರಸಾ ನಿಗಮದ ಉತ್ಪಾದನೆ ಮತ್ತು ವ್ಯವಹಾರ ಚಟುವಟಿಕೆಗಳ ಪ್ರಭಾವದಿಂದ ಪರಿಸರದ ಮೇಲುಂಟಾಗುವ ಮಹತ್ವಪೂರ್ಣ ಅಂಶಗಳನ್ನು ಗುರುತಿಸಿ, ಅನ್ವಯಿಸುವ ಕಾನೂನು ಮತ್ತು ಇತರೆ ಅಗತ್ಯಗಳನ್ನು ಪಾಲಿಸಿ, ಪರಿಸರವನ್ನು ಕಾಪಾಡುವಲ್ಲಿ ಜವಾಬ್ದಾರಿಯುತ ನಿರ್ಣಯಗಳನ್ನು ತೆಗೆದುಕೊಂಡು ಪರಿಸರ ಮಾಲಿನ್ಯವನ್ನು ನಿರ್ಮೂಲನಗೊಳಿಸಿ ಅಥವಾ ತಗ್ಗಿಸಿ ಮತ್ತು ನಿರಂತರ ಸುಧಾರಣೆಗಳೊಂದಿಗೆ ಪರಿಸರದ ಮೇಲುಂಟಾಗುವ ದುಷ್ಪರಿಣಾಮಗಳನ್ನು ಕನಿಷ್ಠಗೊಳಿಸಲು ಬದ್ಧವಾಗಿದೆ. ಪರಿಸರ ಸಂಬಂಧಿ ವಿಷಯಗಳನ್ನು ವಿಮರ್ಶಿಸಿ ನಿಯತಕಾಲಿಕ ಗುರಿ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರ ಮಟ್ಟವನ್ನು ಹೆಚ್ಚಿಸಲು ಬದ್ಧವಾಗಿದೆ. ನಿಗಮದಲ್ಲಿ ಉತ್ತಮ ಪರಿಸರ ನಿರ್ವಹಣೆ ಪದ್ಧತಿಗಾಗಿ ಎಲ್ಲಾ ಆಸಕ್ತ ಪಕ್ಷಗಳೊಂದಿಗೆ ನೇರ ಸಂಪರ್ಕವನ್ನು ಹೊಂದಲು ಪ್ರಯತ್ನಿಸುತ್ತಿದೆ.

<u>ಸುರಕ್ಷತೆ ಕಾರ್ಯನೀತಿ</u>

‘ಆರೋಗ್ಯ ಮತ್ತು ಸುರಕ್ಷತೆ ಕಾರ್ಯನೀತಿ’ ವಿವರಣೆ – ಈ ದಸ್ತಾವೇಜು ಸಾಮಾನ್ಯ ಅಗತ್ಯಗಳ ಸ್ಥೂಲವಿವರಣೆಯನ್ನು ಕರಾರಸಾನಿಗಮದ ಕೇಂದ್ರ ಕಚೇರಿ, ವಿಭಾಗೀಯ ಕಾರ್ಯಾಗಾರ ಹಾಗೂ ಘಟಕ–4 ರಲ್ಲಿ ಸುರಕ್ಷಿತ ಮತ್ತು ಆರೋಗ್ಯದಾಯಕ ಕರ್ತವ್ಯ ನಿರ್ವಹಣಾ ಪರಿಸರವನ್ನು ನೀಡುವುದು. ಸುರಕ್ಷತೆಯ ಬಗ್ಗೆ ತಿಳುವಳಿಕೆಯನ್ನು ಎಲ್ಲಾ ಖಾಯಂ ಹಾಗೂ ತಾತ್ಕಾಲಿಕ ಸಿಬ್ಬಂದಿ ವರ್ಗದವರಿಗೆ ಕೈಪಿಡಿ ಮಾದರಿಯಲ್ಲಿ ಲಭ್ಯಗೊಳಿಸಲಾಗಿದೆ. ಈ ಕಾರ್ಯನೀತಿಯು ಸುರಕ್ಷತೆಯ ಶಾಸನಗಳನ್ನೊಳಗೊಂಡು ಕರಾರಸಾನಿಗಮದ ಪೂರಕಗಳನ್ವಯ ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ. ಸುರಕ್ಷತಾ ಕಾರ್ಯನೀತಿ ಕಾರ್ಯಕ್ರಮದಲ್ಲಿ ಎಲ್ಲಾ ಸಿಬಂದಿ ವರ್ಗದವರು ಸುರಕ್ಷಿತ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹಾಗೂ ನಿರ್ಧಿಷ್ಟವಾದ ಫಲಿತಾಂಶ ಸುರಕ್ಷತಾ ಕಾರ್ಯನೀತಿಯನ್ನು ನಿರಂತರವಾಗಿ ಪಾಲಿಸುವುದರಿಂದ ಪಡೆಯಬಹುದಾಗಿದೆ.